RegdNo B G 155 Sri 17—6—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅಭಿನವನಿವಾಸ್ಯೇದಾರ್ ಎಂ ವಿ ಸುಬ್ಬರಾಯರು ಸಂಪಾದಕರು — ಧರ್ಮಪ್ರಜಾಶಿನಿರತ ಎಂ ಎಸ್ ಕೃಷ್ಣಶಾಸ್ತ್ರಿ 2ಪೈ

ಮೈಸೂರು ರಾಜ್ಯಕ್ಕೆ ರಾಷ್ಟ್ರಾಧ್ಯಕ್ಷರ ಬೇಟಿ

ಶೀರ್ಷಿಕೆ

ಬೆಂಗಳೂರು— ಭಾರತ ರಾಷ್ಟ್ರಾಧ್ಯಕ್ಷ ಡಾ॥ ರಾಧಾಕೃಷ್ಣನರು ರಾಜ್ಯಕ್ಕೆ ಸೆಪ್ಟಂಬರು ತಿ॥ 10, 11, 12 ರಲ್ಲಿ ಭೇಟಿಕೊಟ್ಟು, ಮೈಸೂರು ವಿಶ್ವವಿದ್ಯಾಲಯದ ಪುಸ್ತಕ ಭಂಡಾರವನ್ನು ಉದ್ಘಾಟಿಸುವರು, ಬೆಳಗಾವಿನಲ್ಲಿ ರಾಷಡೆ ಸ್ಮಾರಕ ಭವನವನ್ನು ಉದ್ಘಾಟಿಸುವರು, ಬೆಂಗಳೂರಿನಲ್ಲಿ ಬಿಷಪ್ ಕಾಟನ್ ಸ್ಕೂಲಿನ ಶತಮಾನೋತ್ಸವದಲ್ಲಿ ಭಾಗವಹಿಸುವರು.

ಒಳ್ಳೇ ಯೋಚನೆ

ಕೈರೊ— ಅಧ್ಯಕ್ಷ ನಾಸೇರ್ ಮತ್ತು ಅಧ್ಯಕ್ಷ ಅಯೂಬರು ಭಾರತ-ಪಾಕ್ ಜಗಳದ ಬಗ್ಗೆ ಮಾತುಕತೆ ನಡೆಸಿ, ಕ್ಷಿಪ್ರದಲ್ಲಿ ಈ ದೇಶಗಳ ವೈಮನಸ್ಸು ಸರಿಹಾರವಾಗಿ ಎಲ್ಲಾ ಶಾಂತಿಯುಂದ ಸೌಮ್ಯವಸ್ಥೆಗೊಳ್ಳಲು ಅತೆಪಡಿದ್ದಾರೆ.

★

ಬಹು ಭಾರಿ ವಿಮಾನ

ಪಾರಿಸ್— 300 ಪ್ರಯಾಣೀಕರು ಕೂತುಕೊಳ್ಳುವಂಥ ರಾಕ್ಷಸಾಕಾರದ ರಷಿಯಾ ವಿಮಾನವು ಬೂಗಳ ವಿಮಾನದಲ್ಲಿ ನಿನ್ನೆ ಇಳಿಯಿತು.

ಭಾರತಕ್ಕೆ ಸಾಲ

ಬೋನ್— ಪಶ್ಚಿಮ ಜರ್ಮನಿ ಸರಕಾರ 5 ಮಿಲಿಯ ಮಾರ್ಕ್ ಸಾಲ ಕೊಡುವ ಬಗ್ಗೆ ಕರಾರಾಯಿತು.

ಕೊಲಂಬೊ— ಮೊನ್ನೆ ಇಲ್ಲಿಗೆ 6 ಮೈಲಿ ದೂರದಲ್ಲಿ ರಷ್ಯಾದ ಯುದ್ಧ ಹಡಗಿನ ರಹಸ್ಯ ಓಡಾಟವು ಕಳವಳ ಹುಟ್ಟಿಸಿದೆ

ಪಾಕಿಸ್ತಾನಿ ಸೈನಿಕರು ಮಡಿದರು

ನವದೆಹಲಿ— ಕಚ್ ಗಡಿಯಲ್ಲಿ ಪಾಕಿಸ್ತಾನಿ ಸೈನಿಕರು ಭಾರತ ವ್ಯವಸ್ಥೆಯನ್ನು ಪತ್ತೇ ಮಾಡಿಕೊಳ್ಳಲೆ ನುಗ್ಗಿದ ಪಾಕಿಸ್ತಾನಿ ಸೈನಿಕರನ್ನು ಭಾರತ ಸೈನಿಕರು ಕೊಂದು, ಗಾಯಗೊಂಡ ಮೇಜರ್ ಬಂಧಿಸಲ್ಪಟ್ಟಿನು.

ಸರಿಯಲ್ಲ

ನವದೆಹಲಿ— ಏಷ್ಯಾ-ಆಫ್ರೋ ಸಮ್ಮೇಳನಕ್ಕೆ ಬರಲು ದಕ್ಷಿಣ ವಿಯಟ್ನಾಂ ಮತ್ತು ಉತ್ತರ ಕೊರಿಯಾಕ್ಕೆ ಆಹ್ವಾನ ಕಳುಹಿಸದಿರುವುದು ಅಲ್ಲಜ್ಞೇ ಅಸಮಾಧಾನ ಉಂಟಾಗಿದೆ

ಇದಕ್ಕೂ ಭಾರತ ರಕ್ಷಣಾ ವಿಧಿ

ಬೆಂಗಳೂರು— ತೇಕಡಾ 50 ಸರಕಾರಕ್ಕೆ ಕೊಡದಷ್ಟಿಧಾರಿ ಆಹಾರ ಧಾನ್ಯ ಉತ್ಪಾದಕರು ಮತ್ತು ಸಂಗ್ರಹಗಾರರ ಮೇಲೆ ಭಾರತ ರಕ್ಷಣಾ ವಿಧಿ ಉಪಯೋಗಿಸಬಹುದೆಂದು ಆಹಾರ ಮಂತ್ರಿ ಹೇಳಿದರು

ಮೈಸೂರು ಮಹಾರಾಜರು

ಅದೋನಿ— ಮೈಸೂರಿನ ಶ್ರೀವಿಜಯ ಮಹಾರಾಜರು ಶ್ರೀ ಜಯಚಾಮರಾಜ ಒಡೆಯರವರು ಮೊನ್ನೆ ಇಲ್ಲಿಗೆ ಬಂದು ಕೂಡಲೇ ಮಂತ್ರಾಲಯಕ್ಕೆ ಶ್ರೀ ರಾಘವೇಂದ್ರ ಸ್ವಾಮಿಗಳವರ ದರ್ಶನಕ್ಕೆ ತೆರಳಿದರು

★

ಬಾಂಬು ಸ್ಫೋಟದಿಂದ —

ಸಿಂಗಪುರ— ಸೈಗಾನಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಾಂಬು ಸ್ಫೋಟವಾಗಿ ಅಂತರರಾಷ್ಟ್ರೀಯ ಹತೋಟಿ ಕವಿಯಾಜ್ಞನ 46 ವಂದಿ ಗಣವಾಣರಾದರು; ಈ ವೈಕಿ ಇಬ್ಬರು ಭಾರತೀಯ ಅಧಿಕಾರಿಗಳು

ಪಾರ್ಲಿಮೆಂಟು ಸದಸ್ಯ ಉತ್ಕರ್ಷ

ಲಂಡನ್ — ಕಾಮನ್ವೆಲ್ತಿನೊಳಗೆ ಕಾಶ್ಮೀರ ಮತ್ತು ಕಚ್‌ನ ರಾಣ್ ವ್ಯಾಜ್ಯದ ವ್ಯಜ್ಯದ ವ್ಯವಸ್ಥೆಯನ್ನು ತಾವು ಸ್ವಾಗತಿಸುವುದಾಗಿ ಕಾಬೆನ್ಸ್ ಸಭೆಯು ಕಿ ಸರ್ವೆಟಿವ್ ಸದಸ್ಯರು ಸೂಚಿಸಿದಾರೆ

ಪ್ರಧಾನಿ ಶಾಸ್ತ್ರಿಗಳು

ಲಂಡನ್— ಭಾರತ ಪ್ರಧಾನಿ ಶಾಸ್ತ್ರಿಗಳು ಬ್ರಿಟಿಷ್ ಪ್ರಧಾನಿ ವಿಲ್ಸನ್‌ರೊಡನೆ ವಿಯಟ್ನಾಂ ವಿಷಯ ಮಾತುಕತೆ ನಡೆಸಿದರು.

★

ಭಾರತಕ್ಕೆ ವಿಜಯ

ವಿಶ್ವಸಂಸ್ಥೆ— ನಿಶ್ಯಸ್ತ್ರೀಕರಣ ಕಮಿಷನ್ನಿನಲ್ಲಿ ಚೀನಾ ವಿರುದ್ಧ ಸ್ಫೋಟಕ ವಿಷಯದಲ್ಲಿ ಮತ ಎಣಿಕೆಯ ಮತ್ತು ಅಣು ಎಸೆದ್ದು ಪ್ರತಿಯಿಂದ ನಾಧಿಸಬೇಕೆಂಬ ಭಾರತ ನಿರ್ಣಯವು 83:-1 ಓಟಿಗಳಿಂದ ಅತಿ ಯಶಸ್ವಿಯಾಗಿ ವಂಜೂರಾಯಿತು — ಚೀನಾದ ಹೆಸರನ್ನು ನಮೂದಿಸದಿದ್ದರೂ ಅದಕ್ಕೆ ಅನ್ವಯಿಸುವುದಾಗಿತ್ತು.

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಪ್ರಾತಃಸಮಹಾಪದ್ಮಾಕ್ಷ ಧರ್ಮಾಧಿಕಾರಿ
ರಾಜಕಾರ್ಯಾಕಕ್ಷ, ಜ್ಯೋತಿರ್ವಿದ್ಯಾಪಣಿ
ಪಂಪಕೃಷ್ಣಜೋಯಿ ಸಂವರಿಂಡ

ಶ್ರೀ ಶಂಕ್ರವಾರ ಚಾತಿ ಶ್ರವಣ

ಭಾಷಾ ಸಮಸ್ಯೆಗೊಂದು ' ರಾಮಬಾಣ '

(ಮುಂದುವರಿದುದು)

(1) ಭಾಷಾ ಸಮಸ್ಯೆಯು ನಾಮಕರಣವಾಡಿ ರಾಷ್ಟ್ರ ವಿರೋಧೀ ಚಟುವಟಿಕೆ ನಡೆಸಿ, ರಾಜ್ಯದಲ್ಲಿ ಅಶಾಂತಿ, ಅಶಿಸ್ತು, ಅರಾಜಕತೆ, ಭಯ, ಭೀತಿ ಗಳನ್ನು ಹರಡುವ ಅರಾಷ್ಟ್ರೀಯಂ ಗುಂಪೊಂದು,

(2) ಆಂಗ್ಲಾ ಭಾಷೆಯಿಂದಲೇ ನಮ್ಮ ವಿಜ್ಞಾನ, ಶಿಕ್ಷಣ ಇತ್ಯಾದಿ ಪ್ರಗತಿ ಆದಿಲ್ಲದೆ ಭಾರತದ ಏಳಿವು ; ಆದ್ದರಿಂದ ಪರಕೀಯ ಭಾಷೆಯಾದಂಽ ಆಂಗ್ಲಾ ಭಾಷೆಯೇ (ಇಂಗ್ಲೆಂಡಿನಿಂದ ಉಚ್ಚಾಟನೆಯಾದಂಽ) ನಮಗಿರಲಿ ಎನ್ನುವ ಗುಂಪೊಂದು.

(3) ಇದೇ ರೀತಿ ಸ್ಪರ್ಧೆ ನಡೆಯುತ್ತಿದ್ದಕ್ಕೆ ತಮ್ಮ ಅಧಿಕಾರದ ಕೆಲ್ಸ ವನ್ನು ಭದ್ರವಾಗಿ ಮಾಡಿಕೊಳ್ಳಲು ಹವಣಿಸುತ್ತಿರುವ ಪುಢಾರಿಗಳ ಗುಂಪೊಂದು

(4) ಆಂಗ್ಲಾ ಭಾಷೆ (ಪರಕೀಯ ಭಾಷೆ) ಇಷ್ಟವಿಲ್ಲ ; ಆದರೂ ಸಹ ಸಧ್ಯ ಪರಿಸ್ಥಿತಿಯಲ್ಲಿ ಇನ್ನಾವ ಭಾಷೆಯೂ ಕೇಂದ್ರದ ಮಟ್ಟದಲ್ಲಿ ಆಡಳಿತ ನಡೆಸಲು ಸಮರ್ಥವಾಗಿಲ್ಲ ; ಆಂಗ್ಲಾ ಭಾಷೆ ಕೇವಲ 2 ರಷ್ಟು ಜನಕ್ಕೂ ತಿಳಿಯುವುದಿಲ್ಲವಾದಂಽ ಆಡಳಿತ ನಡೆಸಲು ಸಮರ್ಥವಾಗಿದೆ (ಸಧ್ಯದ ಪರಿಸ್ಥಿತಿಯಲ್ಲಿ) ಎನ್ನುವ ಗುಂಪೊಂದು,

(5) ಪರಕೀಯ ದಾಸ್ಯದ ದ್ಯೋತಕವಾದ ಪರಕೀಯ (ಆಂಗ್ಲಾ) ಭಾಷೆಯನ್ನು ಉಚ್ಚಾಟನೆ ಮಾಡಿ ನಮ್ಮದೇ ಆದ ರಾಷ್ಟ್ರಭಾಷೆ ಇಂದೇಳೆ ನ್ನುವ ರಾಷ್ಟ್ರೀಯಂ ಗುಂಪೊಂದು,

ನಾಲ್ಕು ಮತ್ತು ಐದನೇ ಗುಂಪನ್ನು ಬಿಟ್ಟರೆ ಇನ್ನಾವುದಕ್ಕೂ ಇದರ ಅಸ್ತಿತ್ವ ಇಲ್ಲ : ಏಕೆಂದರೆ, ಇವರಿಗೆ ಯಾವ ಭಾಷೆ ಬಂದರೇನು ? ಹೋದರೇನು ? ತಮ್ಮ ರಾಜಕಾರಣ ಗದ್ದರೆ ಸಾಕು.

ಹಾಗಾದಮೇಲೆ ಈ ಸಮಸ್ಯೆಯ ಪರಿಹಾರಕ್ಕೆ ' ರಾಮಬಾಣ ' ದಂತಹ ಸಾಧನವಾದ, ಹಿಂದಿ ಮತ್ತು ಇಂಗ್ಲೀಷು ಭಾಷೆಯ ತಿಕ್ಕಾಟವನ್ನು ಹೋಗಲಾಡಿಸುವ, ಉತ್ತರ, ದಕ್ಷಿಣ ಎಂಬ ಭೇದವನ್ನು ಕಿತ್ತೆಸೆಯುವ, ದುಷ್ಟ ಮತ್ತು ಆಂತರಿಕ್ಷೀಯ ಶಕ್ತಿಗಳನ್ನೆಲ್ಲಾ ದಮನ ಮಾಡಿ, ಅವರಿಗೆಲ್ಲಾ ಜನ್ಮಜನ್ಮಕ್ಕೂ ಮರೆಯದಂತಹ, ವಿಶ್ವಮಾನ್ಯವಾದ ಒಂದು ಸಾರ್ವಭೌಮವಾದ ಭಾಷೆಯನ್ನು ಬಳಕೆಗೆ ತರಲು ದಾವು ಪ್ರಯತ್ನಿಸಬೇಕಾಗಿದೆ.

ನಮ್ಮ ಭಾರತೀಯ ಭಾಷೆಗಳ (ಮುನ್ನೂರಕ್ಕೂ ಮಿಕ್ಕ) ಮಾತೃಭಾಷೆ ಯಾವ, ವಿಶ್ವದಲ್ಲೇ ಪ್ರಖ್ಯಾತಿ ಪಡೆದಿರುವ, ದೇವ ಭಾಷೆಯಾದ, ಸಂಸ್ಕರಿಸಲ್ಪಟ್ಟಿರುವ ಮತ್ತು ಸರ್ವಸಾಮಾನ್ಯವಾದ ಭಾಷೆಯೆಂ ದರೆ ' ಸಂಸ್ಕೃತ ' ಭಾಷೆಯೊಂದೇ ! ಸಂಸ್ಕೃತ ಎಂದೊಡನೆ ಭಾರತೀಯರೆಲ್ಲ ರನ್ನೂ ಏಕಸೂತ್ರೀಕರಿಸಿ, ಗತಶತಾಲದ ಸಂಸ್ಕೃತಿಯನ್ನೂ ಜನಕೋಟಿಯಲ್ಲಿ ಸುಪ್ತವಾಗಿರುವ ರಾಷ್ಟ್ರೀಯ ಕೆಚ್ಚನ್ನೂ ಬಡಿದೆಬ್ಬಿಸಿ, ಈ ಭಾಷಾ ಗೊಂದಲವೇ ಮಾಯವಾಗುವಂತೆ ಮಾಡಿ ವೈರೊಬಲ್ಲ ವಿಶ್ವ ಸ್ಪರ್ಧಿಸಿದ್ದ ರಾಷ್ಟ್ರಭಾಷೆ ಯಾಗಿದೆ. (ಮುಂದುವರಿಯುವುದು)

Sri 'SATYAVADI' Daily

Oldest Newspaper in the State]— Golden Jubilee 1966

Help The GORAKSHANA

.... ಗೋರಕ್ಷಣಕ್ಕೆ ಬೆಂಬಲ ನೀಡಿ ....

ವುಡ್‌ಲ್ಯಾಂಡ್ ಜನದಟ್ಟಣೆಯ 4 ನೇ ವಾರ

ಪ್ರೇಕ್ಷಕರಿಂದ ತುಂಬಿ ತುಂದಿತುಳುಕುವ ಚಿಕ್ಕಮಂದಿರದಲ್ಲಿ ಸ್ಪರ್ಧಾರ್ಹವಾಗುತ್ತಿರುವ

ಸುಂದರ ದೃಶ್ಯಕಳಾ, ಸಮೃದ್ಧ ಸಂಗೀತ, ಅಕಶ್ಚನಚೇತನ ನೃತ್ಯಗಳು

ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಚಿತ್ರ

ಜಾನವರ್ (ಹಿಂದಿ) Janwar

ತಾರಾಗಣ— ಶಮ್ಮಿ ಕಪೂರ್, ರಾಜಶ್ರೀ, ಪೃಥ್ವಿರಾಜ್, ರಾಜೇಂದ್ರನಾಥ್

ಅಪೆರ— 18-6-65 ರಿಂದ

ಎಂ. ಜಿ. ರಾಮಚಂದ್ರ — ಭಾನುಮತಿ ಅಭಿನಯಿಸಿರುವರು

ಮ ಮ ರ್ ಯೋ ಗಿ

ಅಮೋಘ ಕಮಾಲು ಚಿತ್ರ ..... ಹೊ ಸ ಕಾ ಪಿ



ಸುಧಾ

ಉತ್ತಮ ಟಾನಿಕ್

SHAKTI SUDHA

A Superb Tonin

Ed ted, priated and published by Dharma pr chara nirata
M S Krishna Rao, at the Satyavadi Press
Chamarajapuram, Mysore 4